DITTO WS

Reg. No. : ....................................

Name : ..........................................

**FY-406**

# FIRST YEAR HIGHER SECONDARY EXAMINATION, MARCH 2023

Part – II

**KANNADA**

Maximum : 80 Scores

Time : 2½ Hours

Cool-off time : 15 Minutes

**ವಿದ್ಯಾರ್ಥಿಗಳಿಗೆ ಸೂಚನೆಗಳು :**

- ಮೊದಲ 15 ನಿಮಿಷ 'ಕೂಲ್ ಆಫ್ ಸಮಯ' ವಾಗಿದೆ. ಪ್ರಶ್ನೆಗಳನ್ನು ಓದಿ ಅರ್ಥೈಸಿಕೊಳ್ಳುವುದಕ್ಕೂ ಉತ್ತರಗಳ ಬಗ್ಗೆ ಯೋಚಿಸುವುದಕ್ಕೂ ಈ ಸಮಯವನ್ನು ಬಳಸಿಕೊಳ್ಳಬಹುದು.
- ಪ್ರಶ್ನೆಗಳನ್ನು ಮತ್ತು ಸೂಚನೆಗಳನ್ನು ಸರಿಯಾಗಿ ಓದಿ ಅರ್ಥೈಸಿಕೊಂಡ ಮೇಲೆ ಉತ್ತರ ಬರೆಯಿರಿ.
- ಉತ್ತರ ಬರೆಯುವಾಗ ಅಂಕ, ಸಮಯ ಮೊದಲಾದವುಗಳನ್ನು ಪರಿಗಣಿಸಬೇಕು.
- ಕೊಟ್ಟಿರುವ ಸೂಚನೆಗಳನ್ನು ಗಮನವಿಟ್ಟು ಓದಿರಿ.

**(1 ರಿಂದ 4 ರ ವರೆಗಿನ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಆವರಣದಿಂದ ಆರಿಸಿ ಬರೆಯಿರಿ.)** **(4 × 1 = 4)**

1. "ಅಮ್ಮಾ ಈ ಹೊತ್ತು ಉಣ್ಣಾಕ ಏನ್ಮಾಡ್ತಿ" – ಹುಗ್ಗಿ ಕಥೆಯಲ್ಲಿ ಬರುವ ಈ ಮಾತನ್ನು ಆಡಿದವರು ಯಾರು ?

   (ಚಂದ್ರ, ಕೊಟ್ರ, ಬಸವ, ತಿಮ್ಮಿ)

2. ಎರಡು ದೇಶಗಳ ನಡುವಿನ ಯುದ್ಧದ ವರ್ಣನೆಯಿರುವ ಕವನ ಯಾವುದು ?

   (ಸುಗ್ಗಿ ಬರುತಿದೆ, ಸುನಾಮಿಯ ಹಾಡು, ಬ್ಲೆನ್ ಹೀಮ್ ಕದನ, ಬೆಳಗು)

3. 'ಕಡಲ ಒಡಲು' ಪಾಠದಲ್ಲಿ ಬಂದಿರುವ ವರ್ಣವೈವಿಧ್ಯಗಳಿಂದ ಕೂಡಿದ ಕಡಲಜೀವಿಗಳಿರುವ ಪ್ರವಾಸಿ ಸ್ಥಳ ಯಾವುದು ?

   (ಅಂಡಮಾನ್, ಗೋವ, ಮಲ್ಪೆ, ಮುಂಬೈ)

4. 'ನಿನ್ನಯ ವೀರರೈವರ ನೋಯಿಸೆನು' ಪಾಠಭಾಗವು ಭಾಮಿನಿ ಷಟ್ಪದಿಯಲ್ಲಿದೆ.

   ಭಾಮಿನಿ ಷಟ್ಪದಿಯಲ್ಲಿರುವ ಸಾಲುಗಳ ಸಂಖ್ಯೆ ಎಷ್ಟು ?

   (ಮೂರು, ನಾಲ್ಕು, ಐದು, ಆರು)



P.T.O.

DITTO WS

**(5 ರಿಂದ 10 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಸೂಚನೆಯಂತೆ ಉತ್ತರಿಸಿರಿ.) (4 × 1 = 4)**

5. ಮಲ್ಲಿಗೆಯಾಗು – ಈ ಪದವನ್ನು ವಿಂಗಡಿಸಿ ಬರೆಯಿರಿ.

6. 'ಬಿನದ' – ಈ ಪದದ ತದ್ಭವ ರೂಪವನ್ನು ಹೆಸರಿಸಿರಿ.

7. ಆದಿತ್ಯ – ಈ ಪದದ ಅರ್ಥವನ್ನು ಬರೆಯಿರಿ.

8. ತಾಯಿಯು ಬುದ್ಧಿವಂತ ವಿದ್ಯಾರ್ಥಿಗಳ ಗೆಳೆತನ ಮಾಡುವಂತೆ ಲಲಿತೆಗೆ ಉಪದೇಶಿಸಿದಳು – ಕೊಟ್ಟಿರುವ ವಾಕ್ಯದಲ್ಲಿ ಬಂದಿರುವ ತದ್ಧಿತ ಪ್ರತ್ಯಯ ಪದವನ್ನು ಗುರುತಿಸಿ ಬರೆಯಿರಿ.

9. ತೃಪ್ತಿ – ಈ ಪದದ ವಿರೋಧ ಪದವನ್ನು ಬರೆಯಿರಿ.

10. ಸಫಲ – ಈ ಪದದ ಭಾವನಾಮ ರೂಪವನ್ನು ಹೆಸರಿಸಿರಿ.

**(11 ರಿಂದ 17 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಐದು ಪ್ರಶ್ನೆಗಳಿಗೆ ಉತ್ತರಿಸಿರಿ.) (5 × 2 = 10)**

11. ಮುರಳಿಯು ಆಫೀಸಿನ ಬೀಗ ಹಾಕಿ ಬಸ್ಸು ನಿಲ್ದಾಣದತ್ತ ನಡೆದನು. – ಕೊಟ್ಟಿರುವ ವಾಕ್ಯದಲ್ಲಿ ಬಂದಿರುವ ಅನ್ಯದೇಶೀಯ ಪದಗಳನ್ನು ಗುರುತಿಸಿ ಬರೆಯಿರಿ.

12. ಬೇಸಗೆ ಕಾಲದಲ್ಲಿನ ನೀರಿನ ಕೊರತೆಯನ್ನು ಸರಿದೂಗಿಸಬೇಕಾದರೆ ನೀರಿನ ಮಿತವಾದ ಬಳಕೆ ಅತೀ ಅಗತ್ಯ. ಈ ಕುರಿತು ಜಾಗೃತಿ ಮೂಡಿಸಲು ಅಗತ್ಯವಾದ ಎರಡು ಘೋಷಣಾ ವಾಕ್ಯಗಳನ್ನು ತಯಾರಿಸಿರಿ.

13. ಕೆಳಗೆ ನೀಡಲಾದ ಮಿಶ್ರವಾಕ್ಯವನ್ನು ಎರಡು ಸರಳ ವಾಕ್ಯಗಳಾಗಿ ಪರಿವರ್ತಿಸಿ ಬರೆಯಿರಿ.

    ಕುವೆಂಪು ಕಾವ್ಯನಾಮದಿಂದಲೇ ಪ್ರಸಿದ್ಧರಾಗಿರುವ ಕುಪ್ಪಳ್ಳಿ ವೆಂಕಟಪ್ಪ ಪುಟ್ಟಪ್ಪ ಅವರು 20ನೇ ಶತಮಾನ ಕಂಡ ಪ್ರಸಿದ್ಧ ಲೇಖಕರಲ್ಲಿ ಒಬ್ಬರು.

14. ಕೆಳಗೆ ನೀಡಲಾದ ಗ್ರಾಮ್ಯ ಭಾಷೆಯ ಪದಗಳನ್ನು ಶಿಷ್ಟಗನ್ನಡಕ್ಕೆ ಪರಿವರ್ತಿಸಿರಿ.

    ನಿದ್ದಿ, ಇದ್ಯ, ಕಂದಯ್ನ, ಇಂಗೋಗ್ಲಿ

15. ಅಡಿಗೆರೆ ಎಳೆದ ಪದವನ್ನು ಬಳಸಿಕೊಂಡು ಬೇರೊಂದು ವಾಕ್ಯವನ್ನು ರಚಿಸಿರಿ.

    ಪರಿಸರ ಸಂರಕ್ಷಣೆಗಾಗಿ ಅಳಿಲಸೇವೆಗೈಯಲು ನಾವೆಲ್ಲರೂ ತಯಾರಾಗಬೇಕು.

16. 'ನಿರ್ಮಲ ಧರ್ಮದಿಂದೆ ಪಾಲಿಸು ಧರೆಯಂ' ಎಂಬ ಮಾತನ್ನು ಯಾರು ಯಾರಿಗೆ ಹೇಳಿದರು ?

17. ತುಳುನಾಡಿನ ಭೂತಾರಾಧನೆಯ ಯಾವುದಾದರೂ ಎರಡು ಪ್ರಬೇಧಗಳನ್ನು ಬರೆಯಿರಿ.

DITTO WS

**(18 ರಿಂದ 22 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಉತ್ತರಿಸಿರಿ.)** **(4 × 4 = 16)**

18. ಸರಿ ಹೊಂದಿಸಿ ಬರೆಯಿರಿ.

| ಅ | ಆ |
|---|---|
| ಕುವೆಂಪು | ಹುಗ್ಗಿ |
| ಎಂ.ಎಸ್.ಕೆ. ಪ್ರಭು | ಮಂಕುತಿಮ್ಮನ ಕಗ್ಗ |
| ಕುಂ. ವೀರಭದ್ರಪ್ಪ | ಬಕ |
| ಡಿ.ವಿ.ಜಿ. | ಸುಗ್ಗಿ ಬರುತಿದೆ |

19. ಕೆಳಗೆ ನೀಡಲಾಗಿರುವ ಕವನದ ಸಾಲುಗಳ ಆಸ್ವಾದನಾ ಟಿಪ್ಪಣಿಯನ್ನು ಬರೆಯಿರಿ.

ಬಂಡನುಂಡು ದುಂಬಿವಿಂಡು ಹಾಡುತಿಹವು ಹಾರುತ,
ಮತ್ತ ಮಧು ಮಾಸವಿದು ಬನ್ನಿರೆಂದು ಸಾರುತ,
ಜಾರುತಿಹುದು ಮಾಗಿ ಚಳಿ
ಕುಸುಮಿಸಿರುವ ಲತೆಗಳಲಿ
ಮೊರೆಯುತಿಹವು ಸೊಕ್ಕಿದಳಿ
ಮುಕ್ತಜೀವರಂದದಿ
ಉಲಿಯೆ ಪಿಕ, ಗಳವೆ ಶುಕ, ಸುಗ್ಗಿ ಬಂದಿತಂದದಿ

20. ಕುಂಬಳಕಾಯಿಯ ಕುರಿತಾದ ನಂಬಿಕೆಯೊಂದರ ಕಥೆ 'ಮೂಢನಂಬಿಕೆಗಳ ಬೀಡಿನಲ್ಲಿ' ಪಾಠಭಾಗದಲ್ಲಿದೆ. ಆ ಕಥೆಯ ಸ್ವಾರಸ್ಯವನ್ನು ಬರೆಯಿರಿ.

21. ಕೆಳಗಿನ ತ್ರಿಪದಿಯ ಆಶಯವನ್ನು ಬರೆಯಿರಿ.

ಹಣ್ಣು ಹಾಲಿಗಿಂತ ಬೆಣ್ಣೆ ತುಪ್ಪಕ್ಕಿಂತ
ಚೆನ್ನಾಗಿ ಕಳಿತ ರಸಬಾಳೆ – ಹಣ್ಣಿಂತ
ಚೆನ್ನ ಕಾಣೆ ತಾಯಿ ಎದೆಹಾಲು

22. ನಿಮ್ಮ ಶಾಲೆಯ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಪ್ರದರ್ಶನಗೊಳ್ಳಲಿರುವ 'ಬಕ' ನಾಟಕದ ಪ್ರಚಾರಕ್ಕಾಗಿ ಅಗತ್ಯವಾದ ಭಿತ್ತಿಪತ್ರವೊಂದನ್ನು ಸಿದ್ಧಪಡಿಸಿರಿ.

**(23 ರಿಂದ 28 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಐದು ಪ್ರಶ್ನೆಗಳಿಗೆ ಒಂದು ಪುಟಕ್ಕೆ ಕಡಿಮೆಯಾಗದಂತೆ ಉತ್ತರಿಸಿರಿ.)** **(5 × 6 = 30)**

23. ನೀವು ಇತ್ತೀಚೆಗೆ ಕೈಗೊಂಡ ಪ್ರವಾಸದ ಅನುಭವವನ್ನು ನೆನಪಿಸಿಕೊಂಡು ಪ್ರವಾಸಕಥನವೊಂದನ್ನು ಬರೆಯಿರಿ.

24. ಡಿ.ವಿ.ಜಿ. ಯವರ ಮಂಕುತಿಮ್ಮನ ಕಗ್ಗದ ಕೆಲವು ಸಾಲುಗಳನ್ನು ಕೆಳಗೆ ನೀಡಲಾಗಿದೆ. ಇದರಲ್ಲಿ ಅಡಕವಾಗಿರುವ ಜೀವನಮೌಲ್ಯವನ್ನು ಕುರಿತು ಲೇಖನವೊಂದನ್ನು ಬರೆಯಿರಿ.

ಹುಳು ಹುಟ್ಟಿ ಸಾಯುತಿರೆ, ನೆಲಸವೆದು ಕರಗುತಿರೆ
ಕಡಲೊಳೆತ್ತಲೋ ಹೊಸದ್ವೀಪವೇಳುವುದು
ಕಳೆಯುತೊಂದಿರಲಲ್ಲಿ, ಬೆಳೆವುದಿನ್ನೊಂದೆಲ್ಲೋ
ಅಳಿವಿಲ್ಲ ವಿಶ್ವಕ್ಕೆ ಮಂಕುತಿಮ್ಮ

25. 'ಬಕ' ನಾಟಕದಲ್ಲಿ ಬರುವ ನಗರಪಾಲಕನ ಪಾತ್ರಚಿತ್ರಣ ಮಾಡಿರಿ.

26. ಕೆಳಗೆ ನೀಡಲಾದ ಕಾವ್ಯಭಾಗದ ಭಾವಾರ್ಥವನ್ನು ಬರೆಯಿರಿ.

ಅದರಿನಾ ಪಾಂಡವರಲೈವರ
ಮೊದಲಿಗನು ನೀನಿರಲು ಧರಣಿಯ
ಕದನವಿತ್ತಂಡಕ್ಕೆ ಕಾಮಿತವಲ್ಲ ಭಾವಿಸಲು
ಇದು ನಿಧಾನವು ಕರ್ಣ ನಿನ್ನ
ಭ್ಯುದಯವನೆ ಬಯಸುವೆನು ನಿನ್ನಯ
ಪದಕೆ ಕೆಡಹುವೆನೈವರನು ನಡೆ ತನ್ನ ಸಂಗಾತ

27. 'ಮನುಷ್ಯ ಎಷ್ಟೇ ಬಲಿಷ್ಟನಾದರೂ ನಿಸರ್ಗದೆದುರು ನಿಲ್ಲಲಾರ' ಎಂಬುದನ್ನು 'ಸುನಾಮಿಯ ಹಾಡು' ಕವನದ ಆಧಾರದಲ್ಲಿ ಸಮರ್ಥಿಸಿ ಬರೆಯಿರಿ.

28. 'ಊರಿನ ಒಳಿತಿಗಾಗಿ ತುಡಿಯುವ ಖಾದ್ರಿಕಾಕನ ವ್ಯಕ್ತಿತ್ವವು ಅಸಾಧಾರಣವಾದುದು' – ಈ ಮಾತಿನ ಆಧಾರದಲ್ಲಿ ಒಸರು ಕಥೆಯಲ್ಲಿ ಬರುವ ಖಾದ್ರಿಕಾಕನ ವ್ಯಕ್ತಿತ್ವ ಚಿತ್ರಣ ಮಾಡಿರಿ.

**(29 ರಿಂದ 31 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಎರಡು ಪ್ರಶ್ನೆಗಳಿಗೆ ಒಂದೂವರೆ ಪುಟಕ್ಕೆ ಕಡಿಮೆಯಾಗದಂತೆ ಉತ್ತರಿಸಿರಿ.)** **(2 × 8 = 16)**

29. 'ವಟವೃಕ್ಷಮೇ ಸಾಕ್ಷಿ' ಪಾಠಭಾಗದ ಕಥೆಯನ್ನು ನಿಮ್ಮ ಮಾತುಗಳಲ್ಲಿ ನಿರೂಪಿಸಿರಿ.

30. 'ನಿರ್ಮಲ ಧರ್ಮದಿಂದೆ ಪಾಲಿಸು ಧರೆಯಂ' ಕಾವ್ಯಭಾಗದ ಸಾರವನ್ನು ಸಂಗ್ರಹಿಸಿ ಬರೆಯಿರಿ.

31. ಹಸಿವಿನ ಭೀಕರತೆಯ ದಾರುಣ ಚಿತ್ರಣ 'ಹುಗ್ಗಿ' ಕಥೆಯಲ್ಲಿ ಪ್ರತಿಬಿಂಬಿತವಾದ ಬಗೆಯ ಕುರಿತು ಲೇಖನವೊಂದನ್ನು ಬರೆಯಿರಿ.

---